ಈ) ಉದ್ಭವಿಸುವುದಿಲ್ಲ.

ವಿಜಾಪುರ ನಗರದಲ್ಲಿ ನಿರ್ಮಿಸಲಾಗುತ್ತಿರುವ ಒಳಾಂಗಣ ಕ್ರೀಡಾಂಗಣ ಕಟ್ಟಡ.

2853:(3906)

ಶ್ರೀ ಬಸವನಗೌಡ ಆರ್.ಪಾಟೀಲ್ (ವಿಜಾಪುರ): ಮಾನ್ಯ ಯುವಜನ ಸೇವಾ ಹಾಗು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ನಗರದಲ್ಲಿ ನಿರ್ಮಿತವಾಗುತ್ತಿರುವ: ಒಳಾಂಗಣ ಕ್ರೀಡಾಂಗಣ ಕಟ್ಟಡ ಅಪೂರ್ಣಗೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಸರ್ಕಾರ ಹಾಗಿದ್ದಲ್ಲಿ ಈ ಬಗ್ಗೆ ಹಣ ಒದಗಿಸಿ ಜರೂರಾಗಿ ಪೂರೈಸಲು ಕ್ರಮ ಕೈಗೊಳ್ಳುವರೇ?

ಶ್ರೀ ನಾಗಪ್ಪ ಸಾಲೋನಿ (ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು):

ಅ) ಹೌದು.

ಆ) ಕೇಂದ್ರ ಸರ್ಕಾರದಿಂದ ಅನುದಾನ ಪಡೆಯಲು ಜರೂರಾಗಿ ಕ್ರಮ ಕೈಗೊಳ್ಳಲಾಗುವುದು.

ಮಾಗಡಿ ಕ್ಷೇತ್ರದ ಲೋಕೋಪಯೋಗಿ ರಸ್ತೆಗಳ ಅಭಿವೃದ್ಧಿ

2855:(3869)

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಮಾಗಡಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಲೋಕೋಪಯೋಗಿ ರಸ್ತೆಗಳು ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಈ ರಸ್ತೆಗಳು ಯಾವುವು?

2) ಈ ರಸ್ತೆಗಳನ್ನು ಯಾವಾಗ ದುರಸ್ತಿಗೊಳಿಸಲಾಗುವುದು? ಇದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):

1) ಹಲವೆಡೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ದುರಸ್ತಿಗೊಳಿಸಬೇಕಾದ ವಿವರ ಕೆಳಕಂಡಂತಿದೆ.

1) ಬಂದಿದೆ-ವಾಹನ ಸಂಚಾರಕ್ಕೆ ದುರಸ್ತಿಗೊಳಿಸಬೇಕಾದ ರಸ್ತೆಗಳು ಈ ಕೆಳಕಂಡಂತೆ ಇರುತ್ತವೆ.

1) ಬೆಂಗಳೂರು-ಮಾಗಡಿ ಹುಲಿಯೂರು ದುರ್ಗ ರಸ್ತೆ (ಸ 35ರಿಂದ 50 ಕಿಮಿ)

2) ಮರೂರು ಕುದೂರು ಸುಗ್ಗನಹಳ್ಳಿ ರಸ್ತೆ,

3) ತಮಿಳುನಾಡು ರಾಜ್ಯ ಗಡಿಯಿಂದ ಆಂದ್ರ ರಾಜ್ಯಗಡಿ ಸೇರುವ ರಸ್ತೆ

4) ಕುದೂರು ಶಿವಗಂಗಾ ರಸ್ತೆ

5) ರಾ.ಹೆ 48ರಿಂದ ತಿಪ್ಪಸಂದ್ರ ಸಂಕೇಘಟ್ಟಯಲ್ಲಾಮಾ ಮಾರ್ಗ ಸುಗ್ಗನಹಳ್ಳಿ ಸೇರುವ ರಸ್ತೆ.

6) ರಾ.ಹೆ.48ರಿಂದ ಬ್ಯಾಲದ ಕೆರೆ ನಾಗತೆಟ್ಟಿ ಹಳ್ಳಿ ಮತ್ತು ತಗ್ಗಿಕುಪ್ಪೆ ಮಾರ್ಗ ಮಾಗಡಿ ಸೇರುವ ರಸ್ತೆ

7) ಎಂ.ಕೆ.ರಸ್ತೆಯಿಂದ ಹಲ್ಲಾ ಶ್ರೀಪತಿಹಳ್ಳಿ ಹಾಲತೆಟ್ಟಿ ಮಾರ್ಗದ ಎಂ.ಹೆಚ್.ರಸ್ತೆಯನ್ನು ಸೇರುವ ರಸ್ತೆ

8) ಬೆಂಗಳೂರು ಮಾಗಡಿ ಹುಲಿಯೂರುದುರ್ಗ ರಸ್ತೆ (50.0 ರಿಂದ 67.00 ಕಿಮಿ)

9) ಮಾಗಡಿ ಕುಣಿಗಲ್ ರಸ್ತೆ

10) ಮಾಗಡಿ ಕೊಟಗಲ್‌ರಸ್ತೆ

11) ಶ್ರೀಗಿರಿಪುರ ತುಮಕೂರು ಗಡಿರಸ್ತೆ ಮಾರ್ಗ, ಮಾರ್ಗ ಚಿಕ್ಕಮಸ್ಕಲ್

12) ಕುದೂರು ಮೊಟಗಾನಹಳ್ಳಿ ರಸ್ತೆ

13) ಬೆಂಗಳೂರು ಮಾಗಡಿ ಹುಲಿಯೂರು ದುರ್ಗ ರಸ್ತೆ (50ರಿಂದ 67ನೇ ಕಿಮಿ)

14) ರಾ.ಹೆ.48ರಿಂದ ಬ್ಯಾಲದಕೆರೆ ನಾಗಶೆಟ್ಟಿಹಳ್ಳಿ ಮತ್ತು ತಗ್ಗೀಕುಪ್ಪೆ ಮಾರ್ಗ ಮಾಗಡಿ ಸೇರುವ ರಸ್ತೆ

2) ಈ ರಸ್ತೆಗಳ ಸಾಮಾನ್ಯ ದುರಸ್ತಿಗಾಗಿ ಬೆಂಗಳೂರು ವಿಭಾಗಕ್ಕೆ 98-99ನೇ ಸಾಲಿಗೆ ರೂ 215.48 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಈ ಅನುದಾನದಲ್ಲಿ ಮಾಗಡಿ ಕ್ಷೇತ್ರಕ್ಕೆ ರೂ 8.20 ಲಕ್ಷಗಳ ಅನುದಾನವು ಲಭ್ಯವಾಗುತ್ತದೆ. ಅದರಲ್ಲಿ ತುರ್ತು ದುರಸ್ತಿ ಮಾಡಲಾಗುತ್ತಿದೆ. ಈ ರಸ್ತೆಗಳ ಡಾಂಬರೀಕರಣಕ್ಕಾಗಿ ರೂ 19.00 ಲಕ್ಷಗಳು ಬೇಕಾಗಿದ್ದು, ಅನುದಾನದ ಲಭ್ಯತೆಯ ಮೇರೆಗೆ ತೆಗೆದುಕೊಳ್ಳಲಾಗುವುದು.

ಮಾಗಡಿ ಕ್ಷೇತ್ರಕ್ಕೆ ವಾರ್ತಾ ಮತ್ತು ಪ್ರಚಾರ ಇಲಾಖೆಯಿಂದ ವಿವಿಧ ಯೋಜನೆಗಳು.

2856:(3870)

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ): ಮಾನ್ಯ ಕಾನೂನು, ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1994 ಡಿಸೆಂಬರನಿಂದ ಈವರೆಗೆ ಮಾಗಡಿ ವಿಧಾನ ಸಭಾ ಕ್ಷೇತ್ರಕ್ಕೆ ವಾರ್ತಾ ಮತ್ತು ಪ್ರಚಾರ ಇಲಾಖೆಯಿಂದ ವಿವಿಧ ಯೋಜನೆಯಲ್ಲಿ ಯಾವ ಯಾವ ಗ್ರಾಮಗಳಿಗೆ ಎಷ್ಟು ಟಿ.ವಿ. ಸೆಟ್ಟುಗಳನ್ನು ಹಾಗೂ ವಿವಿಧ ಸವಲತ್ತುಗಳನ್ನು ನೀಡಲಾಗಿದೆ? (ಪ್ರತಿ ಸಾಲಿನಲ್ಲಿ ಗ್ರಾಮಕ್ಕೆ ನೀಡಿದ ಟಿ.ವಿ. ಸೆಟ್ಟುಗಳ ವಿವರ, ವಿವಿಧ ಸವಲತ್ತುಗಳ ವಿವರವನ್ನು ನೀಡುವುದು)

ಆ) ಈ ಬಗ್ಗೆ ಹಾಲಿ ಚಾಲ್ತಿಯಲ್ಲಿರುವ ಹಾಗೂ ಬಾಕಿ ಇರುವ ಕಾರ್ಯಕ್ರಮಗಳು ಯಾವುವು? ಇವುಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಇ) ಈ ಸಾಲಿನಲ್ಲಿ ಎಷ್ಟು ಟಿ.ವಿ.ಸೆಟ್‌ಗಳನ್ನು ಹಾಗೂ ಸವಲತ್ತುಗಳನ್ನು ನೀಡಲು ಉದ್ದೇಶಿಸಲಾಗಿದೆ? ಅವುಗಳನ್ನು ಯಾವಾಗ ನೀಡಲಾಗುವುದು?

ಶ್ರೀ ಎಂ.ಸಿ.ನಾಣಯ್ಯ (ಕಾನೂನು, ವಾರ್ತಾ ಮತ್ತು ಪ್ರಚಾರ ಸಚಿವರು):

ಅ) 1994 ಡಿಸೆಂಬರ್‌ದಿಂದೀಚೆಗೆ ಸರ್ಕಾರದ ವಿಶೇಷ ಘಟಕ ಯೋಜನೆಯಡಿ ಮಾಗಡಿ ವಿಧಾನ ಸಭಾ ಕ್ಷೇತ್ರಕ್ಕೆ ಒಳಪಡುವ ಈ ಕೆಳಕಂಡ ಗ್ರಾಮಗಳಲ್ಲಿ ದೂರದರ್ಶನ ಸೆಟ್ಟುಗಳನ್ನು ಅಳವಡಿಸಲಾಗಿದೆ.